ದಿನಾಂಕ: 19-01-2019 ರಂದು ಮಧ್ಯಾಹ್ನ 3-30 ಘಂಟೆಗೆ ಜಿಲ್ಲಾಧಿಕಾರಿಗಳು,ಉ.ಕ. ಕಛೇರಿ ಸಭಾ ಭವನದಲ್ಲಿ ಸನ್ಮಾನ್ಯ ಶ್ರೀ ಅನಂತಕುಮಾರ ಹೆಗಡೆ, ಮಾನ್ಯ ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ರಾಜ್ಯ ಸಚಿವರು, ಭಾರತ ಸರಕಾರ ಹಾಗೂ ಉತ್ತರ ಕನ್ನಡ ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ(ದಿಶಾ) ಸಮಿತಿ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಉತ್ತರ ಕನ್ನಡ ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ(ದಿಶಾ) ಸಮಿತಿ ಸಭೆಯ ನಡುವಳಿಗಳು.

ಪ್ರಾರಂಭದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉತ್ತರ ಕನ್ನಡ ಜಿಲ್ಲಾ ಪಂಚಾಯತ ಕಾರವಾರ ರವರು ಸಭೆಗೆ ಆಗಮಿಸಿದ ಸನ್ಮಾನ್ಯ ಶ್ರೀ ಅನಂತಕುಮಾರ ಹೆಗಡೆ, ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ರಾಜ್ಯ ಸಚಿವರು, ಭಾರತ ಸರಕಾರ ಹಾಗೂ ಅಧ್ಯಕ್ಷರು ಉತ್ತರ ಕನ್ನಡ ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ(ದಿಶಾ) ಸಮಿತಿ ಇವರಿಗೆ ಸ್ವಾಗತ ಕೋರಿದರು. ಅದರಂತೆ ಸಭೆಗೆ ಹಾಜರಿದ್ದ ಕಾರವಾರ-ಅಂಕೋಲಾ, ವಿಧಾನಸಭಾ ಸದಸ್ಯರಿಗೆ, ನಾಮ ನಿರ್ದೇಶಿತ ಸದಸ್ಯರುಗಳಿಗೆ, ಅಧ್ಯಕ್ಷರು, ಜಿಲ್ಲಾ ಪಂಚಾಯತರವರನ್ನು, ಮಾನ್ಯ ಜಿಲ್ಲಾಧಿಕಾರಿಗಳು, ಅಪರ ಜಿಲ್ಲಾಧಿಕಾರಿಗಳನ್ನು, ಅಧ್ಯಕ್ಷರು, ತಾಲೂಕ ಪಂಚಾಯತರವರುಗಳನ್ನು ಸ್ವಾಗತಿಸಿದರು. ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳನ್ನು ಪತ್ರಕರ್ತರನ್ನು ಸ್ವಾಗತಿಸಿ,ಇಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ನಡೆಸಿಕೊಡುವಂತೆ ದಿಶಾ ಸಮಿತಿ ಅಧ್ಯಕ್ಷರು ಹಾಗೂ ಮಾನ್ಯ ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ರಾಜ್ಯ ಸಚಿವರು, ಭಾರತ ಸರಕಾರ ರವರಲ್ಲಿ ವಿನಂತಿಸಿಕೊಂಡರು.

ಮಾನ್ಯ ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ರಾಜ್ಯ ಸಚಿವರು, ಭಾರತ ಸರಕಾರ ರವರು ಅಧ್ಯಕ್ಷತೆಯನ್ನು ವಹಿಸಿಕೊಂಡು ಪ್ರಾರಂಭದಲ್ಲಿ ದಿನಾಂಕ:27-06-2018 ರಂದು ಜರುಗಿದ ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ(ದಿಶಾ) ಸಮಿತಿ ಸಭೆಯ ನಡವಳಿಗಳ ಮೇಲೆ ಸಂಬಂಧಿಸಿದ ಇಲಾಖೆಯವರ ಪಾಲನಾ ವರದಿಯನ್ನು ಪರಿಶೀಲನೆ ನಡೆಸಿದರು.

1). ವಸತಿ:

ಸಭೆಯಲ್ಲಿ ಪ್ರಧಾನ ಮಂತ್ರಿ ಅವಾಸ ಯೋಜನೆ(**PMAY**)ಯಡಿ ಪ್ರಗತಿ ವರದಿಯನ್ನು ಪರಿಶೀಲಿಸಿದ ಮಾನ್ಯ ಸಚಿವರು ಪ್ರಗತಿ ಕುಂಠಿತವಾಗಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಸದರಿ ಯೋಜನೆಯಡಿ ಇಲ್ಲಿಯವರೆಗೆ ಮರಳಿನ ಸಮಸ್ಯೆ ಇದ್ದು ಈಗ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ವಸತಿ ಯೋಜನೆಗಾಗಿ ಮರಳು ಒದಗಿಸುವುದಾಗಿ ತಿಳಿಸಿದ್ದು, ಈಗ ಸಮಸ್ಯೆಯನ್ನು ಸಮಾಧಾನಕರವಾಗಿ ಬಗೆಹರಿಸಿರುವುದಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವಿವರಿಸಿದರು. ಅಧ್ಯಕ್ಷರು ಇದರ ಬಗ್ಗೆ **follow up** ಮಾಡಲು ಸೂಚಿಸಿದರು. ಸದರಿ ಯೋಜನೆಯಡಿ ನಿವೇಶನ ಸಮಸ್ಯೆ ಬಗ್ಗೆ ವಿಚಾರಿಸಿದರು. ಸದರಿ ಯೋಜನೆಯಡಿ ಮೊದಲನೆಯದಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಜಿ.ಪಿ.ಎಸ್. ಕೂಡ ಮಾಡಲಾಗಿದೆ. ನಿವೇಶನ ಬಗ್ಗೆ ಸೈಟ್‌ಲೆಸ್/ ಹೌಸ್‌ಲೆಸ್ ಯೋಜನೆಯನ್ನು ರೂಪಿಸಲಾಗಿದ್ದು, ಅದರಲ್ಲಿ ಶೇ. 99% ಪ್ರಗತಿ ಸಾಧಿಸಲಾಗಿದೆ. ಕೆಲವು ಫಲಾನುಭವಿಗಳು ಜಾಗ ಮತ್ತು ಮನೆ ಇಲ್ಲದೆ ಬಾಡಿಗೆ ಮನೆಯಲ್ಲಿ ಇರುವವರನ್ನು ಆಯ್ಕೆ ಮಾಡಿರುವುದಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವಿವರಿಸಿದರು. ನಿವೇಶನ ಸಮಸ್ಯೆ ಇದ್ದಲ್ಲಿ ಆಯ್ಕೆಯಾದ ಫಲಾನುಭವಿಗೆ ಜಾಗವನ್ನು ಗುರುತಿಸಿಕೊಳ್ಳುವಂತೆ ತಿಳಿಸಿ ಇದರಿಂದ ಮೀನುಗಾರಿಕೆ ಸಮುದಾಯದವರಿಗೆ ತುಂಬಾ ಅನುಕೂಲವಾಗುವುದು. ಆದ್ದರಿಂದ ಫಲಾನುಭವಿಗಳು ಗುರುತಿಸಿದ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಡುವ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು. ಇದರ ಬಗ್ಗೆ ಪ್ರಸ್ತಾವನೆ ಸಲ್ಲಿಸುವುದಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವಿವರಿಸಿದರು.

ಸದರಿ ಯೋಜನೆಯಡಿ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಸದರಿ ಯೋಜನೆಯಡಿ ವರ್ಷವಾರು ಬಾಕಿ ಇರುವ ಮನೆಗಳ ಪಟ್ಟಿ ಸಲ್ಲಿಸುವಂತೆ ಸೂಚಿಸಲಾಯಿತು.

(ಕ್ರಮ: ಉಪಕಾರ್ಯದರ್ಶಿ(ಅಭಿವೃದ್ಧಿ)ಜಿ.ಪಂ.ಕಾರವಾರ)

2) ಪಿ.ಎಂ.ಜಿ.ಎಸ್.ವೈ:

ಸದರಿ ಯೋಜನೆಯಡಿ ಪೇಸ್ –1 ಮತ್ತು ಪೇಸ್–2 ಯಡಿ ಬಿಡುಗಡೆಯಾದ ಅನುದಾನ ಹಾಗೂ ಮಂಜೂರಾದ ಕಾಮಗಾರಿಗಳ ಬಗ್ಗೆ ವಿಚಾರಿಸಿದರು. ನಿರ್ವಹಣೆಗೆ ಅನುದಾನ ಬಂದಿದ್ದು, ಪೇಸ್ –2 ನಲ್ಲಿ 15 ಕಾಮಗಾರಿಗಲ್ಲಿ 14 ಕಾಮಗಾರಿ ಪೂರ್ಣಗೊಂಡಿದ್ದು, ಹೊನ್ನಾವರ ತಾಲೂಕಿನ ತಾವಟಾ–ವಂಟಿಹಳ್ಳಿ 6 ಕಿ.ಮೀ. ರಸ್ತೆ ಕಾಮಗಾರಿ ಅರಣ್ಯ ಪ್ರದೇಶದಲ್ಲಿ ಬರುವುದರಿಂದ ಬಾಕಿ ಇರುವುದಾಗಿ ಅಧಿಕಾರಿಗಳು ವಿವರಿಸಿದರು. ಸದರಿ ಕಾಮಗಾರಿಯ ಬಗ್ಗೆ ಅರಣ್ಯ ಅಧಿಕಾರಿಗಳೊಂದಿಗೆ ಚರ್ಚಿಸಿ ಪೂರ್ಣಗೊಳಿಸುವ ಬಗ್ಗೆ ಕ್ರಮವಹಿಸುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.

(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು, ಪಿ.ಎಂ.ಜಿ.ಎಸ್.ವೈ.)

3) ಕುಡಿಯುವ ನೀರು:

ಮುಂಡಗೋಡ ತಾಲೂಕಿನ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ನೀರಿನ ಗುಣಮಟ್ಟವನ್ನು ಪರಿಶೀಲಿಸಿದ ಬಗ್ಗೆ ವರದಿಯನ್ನು ನೀಡಿದ್ದೀರಿ. ಆದರೆ ಇದಕ್ಕೆ ಪರಿಹಾರ ಏನು? ಬ್ಲಿಚ್ ಮಾಡುವುದರಿಂದ ನೀರಿನ ಗುಣಮಟ್ಟ ಸುಧಾರಿಸುವುದಿಲ್ಲ. ಬೇರೆ ರೀತಿ ತಾಂತ್ರಿಕತೆ ಬಳಸಲು ತಿಳಿಸಲಾಗಿತ್ತು ಇದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ಸಭಾಧ್ಯಕ್ಷರು ಪ್ರಶ್ನಿಸಿದರು. ಆಗ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರತಿಯೊಂದು ಗ್ರಾಮ ಪಂಚಾಯತಿಯಲ್ಲಿ ಆರೋ ಪ್ಲಾಂಟ್ ಅಳವಡಿಸಲಾಗಿದೆ. ಈಗಾಗಲೇ 206 ಆರೋ ಪ್ಲಾಂಟ್‌ಗಳನ್ನು ಅಳವಡಿಸಿ 5 ವರ್ಷ ನಿರ್ವಹಣೆ ಕಾರ್ಯವನ್ನು ಏಜೆನ್ಸಿ ರವರಿಗೆ ವಹಿಸಲಾಗಿದೆ ಎಂಬ ಬಗ್ಗೆ ಮಾಹಿತಿ ನೀಡಿದರು. ಆರೋ ಪ್ಲಾಂಟ ಅಳವಡಿಸುವುದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. ನೀರಿನ ಮೂಲಕ್ಕೆ ಟ್ರಿಟ್‌ಮೆಂಟ್ ಮಾಡಿಸಬೇಕು. ಸದರಿ ಸಮಸ್ಯೆಯನ್ನು ಬಗೆ ಹರಿಸಲು ಸಿಲ್ವರ್ ನೆನೊಪಾರ್ಟಿಕಲ್ ತಾಂತ್ರಿಕತೆ ಬಳಸುವ ಬಗ್ಗೆ ಕ್ರಮ ವಹಿಸಲು ಸೂಚಿಸಿದರು.

ಕಾರವಾರ–ಅಂಕೋಲಾ ಶಾಸಕಿರವರು ಬಹುಗ್ರಾಮ ಯೋಜನೆಯಡಿ ಕೈಗೊಂಡ ಗೋಕರ್ಣ ಕುಡಿಯುವ ನೀರಿನ ಕಾಮಗಾರಿಯಿಂದ ಅಂಕೋಲಾ ಭಾಗದ ಜನರಿಗೆ ನೀರು ಲಭ್ಯವಾಗುತ್ತಿಲ್ಲ ಎಂಬ ವಿಷಯದ ಕುರಿತು ಗಲಾಟೆ ನಡೆಯುತ್ತಿರುವ ಬಗ್ಗೆ ಸಭಾಧ್ಯಕ್ಷರ ಗಮನಕ್ಕೆ ತಂದರು. ಸದರಿ ಕಾಮಗಾರಿಯಡಿ 4 ಗ್ರಾಮಪಂಚಾಯತಿಗಳಿಗೆ ನೀರು ಕೊಡುವ ಯೋಜನೆಯಾಗಿದ್ದು, ಈ ಯೋಜನೆಯಡಿ ಅಂಕೋಲಾ ತಾಲೂಕಿನ ಜನರಿಗೆ ನೀರು ಕೊಡಲು ಸಾದ್ಯವಾಗುತ್ತಿಲ್ಲ ಸದರಿ ಸ್ಥಳದಲ್ಲಿ ಹೊಸ ಯೋಜನೆ ಹಾಕಿಕೊಂಡಿದ್ದು, ಪಿ.ಎಸ್.ಆರ್ ಆಗಿದೆ. ಇದರ ಬಗ್ಗೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾಹಿತಿ ನೀಡಿದರು.

ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ, ಪ್ರಗತಿ ತುಂಬಾ ಕಡಿಮೆ ಇರುವುದಾಗಿ ಅಸಮಾಧಾನ ವ್ಯಕ್ತಪಡಿಸಿದರು. ಫೇಬ್ರವರಿ ತಿಂಗಳಿನಲ್ಲಿ ಕುಡಿಯವ ನೀರಿನ ಸಮಸ್ಯೆ ಉಂಟಾಗುವ ಸಂಭವಿದ್ದು, ಇದರ ಬಗ್ಗೆ ಹೆಚ್ಚಿನ ಗಮನ ಹರಿಸಿ, ಬಾಕಿ ಇರುವ ಕುಡಿಯುವ ನೀರಿನ ಕಾಮಗಾರಿಗಳನ್ನು ಪೂರ್ಣಗೊಳಿಸುವ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

ಕುಡಿಯುವ ನೀರಿನ ಗುಣಮಟ್ಟದ ಪರಿಶೀಲನೆ ವಿಶೇಷ ತಾಂತ್ರಿಕತೆ ವಹಿಸುವ ಬಗ್ಗೆ ಕ್ರಮ ವಹಿಸುವುದು.

(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು, ಆರ್.ಡಬ್ಲೂಎಸ್ ಕಾರವಾರ)

4) ತೋಟಗಾರಿಕೆ:

ಜೇನು ಕೃಷಿ ಪ್ರಗತಿ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ಸಭಾಧ್ಯಕ್ಷರು ಜಿಲ್ಲೆಯಲ್ಲಿ ಸುಮಾರು 2500 ದಷ್ಟು ಜೇನು ಕೃಷಿಕರಿದ್ದು, 10 ಸಾವಿರ ರೈತರವರೆಗೂ ಹೆಚ್ಚಿಸಬಹುದು ಎಂಬ ಬಗ್ಗೆ ಮಾಹಿತಿ ನೀಡಿದರು. ಜಿಲ್ಲೆಯಲ್ಲಿ ಹನಿ ಮಿಷನ್ ಆರಂಭಿಸಲು ತಾಲೂಕುವಾರು ಜೇನು ಕೃಷಿ ಮಾಡುವ ರೈತರ ಬೇಡಿಕೆ ಬಗ್ಗೆ ಹಾಗೂ ಬೇಕಾಗುವ ಸೌಲಭ್ಯಗಳ ಬಗ್ಗೆ ಮಾಹಿತಿ ಒದಗಿಸುವುದು ಹಾಗೂ ಶೇ.100% ಕೆ.ವಿ.ಕೆ ಯಿಂದ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

ಗೋಕರ್ಣದಲ್ಲಿ ಗ್ರಾಮೀಣ ಮಾರುಕಟ್ಟೆ ಮಾಡುವ ಬಗ್ಗೆ ವಿಚಾರಿಸಿದರು. ಅಧಿಕಾರಿಗಳು ಈ ಕುರಿತು ಮಾಹಿತಿ ನೀಡಿದರು. ವೆಜಿಟೇಬಲ್ ಕ್ಲಸ್ಟರ್ ಮಾಡಲು ಈ ವರ್ಷದ ಬಡ್ಜೆಟ್ ನಲ್ಲಿ ರೂ. 40.00 ಲಕ್ಷಗಳನ್ನು ಹೆಚ್ಚುವರಿಯಾಗಿ ಮಂಜೂರಿ ಮಾಡಿಕೊಳ್ಳಲಾಗಿದೆ. ಒಟ್ಟೂ ರೂ. 80.00 ಲಕ್ಷ ಅನುದಾನ ಇದ್ದು, ಇದರಲ್ಲಿ ಗ್ರಾಮ ಹಾಥ್ ಕೂಡ ನಿರ್ಮಾಣ ಮಾಡುವ ಯೋಜನೆ ಇದ್ದು, ನರೇಗಾ ಯೋಜನೆಯಡಿ ಕಾರ್ಯಕ್ರಮ ಹಾಕಿಕೊಂಡಿದ್ದು, ಸದರಿ ಯೋಜನೆಯನ್ನು 6 ತಿಂಗಳೊಳಗೆ ಪೂರ್ಣಗೊಳಿಸುವುದಾಗಿ ಮುಖ್ಯ

ಕಾರ್ಯನಿರ್ವಾಹಕ ಅಧಿಕಾರಿಗಳು ವಿವರಿಸಿದರು. ಸದರಿ ಕಾರ್ಯಕ್ರಮವನ್ನು ಇ.ನೆಮ್‌ನೊಂದಿಗೆ ಜೋಡಿಸಿ, ಅದಕ್ಕೆ ಬೇಕಾಗುವ ಅವಶ್ಯಕತೆಗಳನ್ನು ಸೇರಿಸಿಕೊಂಡು ಪರಿಷ್ಕರಿಸಿಕೊಳ್ಳುವಂತೆ ಸಭಾಧ್ಯಕ್ಷರು ಸೂಚಿಸಿದರು.

(ಕ್ರಮ: ತೋಟಗಾರಿಕೆ ಇಲಾಖೆ)

5) ಕೃಷಿ/ತೋಟಗಾರಿಕೆ:

ಪ್ರಗತಿ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ಸಭಾಧ್ಯಕ್ಷರು ನೆಲಗಡಲೆ ಮತ್ತು ಜೋಳ ಬಿಡಿಸುವ ಯಂತ್ರ ಲಭ್ಯವಿರುವುದಾಗಿ ತಿಳಿಸಿ, ಎರಡು ಯಂತ್ರಗಳ ಡೆಮೋ ಮಾಡಿ ರೈತರಿಗೆ ತೋರಿಸಿ, ಜಿಲ್ಲಾ ಕೈಗಾರಿಕೆ ಕೇಂದ್ರದವರ ಸಹಯೋಗದೊಂದಿಗೆ ಇಲಾಖೆಯಿಂದ ರೈತರಿಗೆ ಕೊಡುವ ವ್ಯವಸ್ಥೆ ಮಾಡಲು ಸೂಚಿಸಿದರು.

ಸಿರಿಧಾನ್ಯ ಬೆಳೆಗಳನ್ನು ಬೆಳೆಸುವ ಬಗ್ಗೆ ಕ್ರಮ ಕೈಗೊಂಡಿದ್ದು, ಹಳಿಯಾಳದಲ್ಲಿ ಚಿಯಾ ಮತ್ತು ಟೆಫ್ಟ್ ಬೆಳೆಗಳನ್ನು 2 ಎಕರೆ ಜಮೀನಿನಲ್ಲಿ ಪ್ರಾತ್ರಕ್ಷತೆ ಮಾಡಲಾಗಿದೆ. ಮುಂಡಗೋಡದಲ್ಲಿ ಮೈನರ್ ಮಿಲ್ಲೆಟ್ ಮಾಡಿದ್ದು ನವಣೆ ಬೆಳೆಯನ್ನು 20 ಎಕರೆ ಜಮೀನಿನಲ್ಲಿ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ವಿವರಿಸಿದರು. ಕೇವಲ ಈ ಜಿಲ್ಲೆಯಲ್ಲಿ ಮಾತ್ರ ಬೀಜಗಳು ಲಭ್ಯವಿದ್ದರಿಂದ **North Canara Brand** ಮಾಡಲು ಅವಕಾಶ ಇದೆ. ಈ ಕಾರ್ಯಕ್ರಮವು ಎಲ್ಲಿಯೂ ಯಶಸ್ವಿಯಾಗಿಲ್ಲ. ಆದ್ದರಿಂದ ಇದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಕ್ರಮ ಜರುಗಿಸಲು ಸೂಚಿಸಿದರು.

ಅಂತರ ಜಲ ಮಟ್ಟ ಸುಧಾರಿಸಲು ಕಾರ್ಯಕ್ರಮವನ್ನು ಈ ತಿಂಗಳ ಅಂತ್ಯದೊಳಗೆ ಮಾಡುವುದಾಗಿ ಅಧಿಕಾರಿಗಳು ತಿಳಿಸಿದರು.

ಪ್ರಧಾನ ಮಂತ್ರಿ ಫಸಲ ಭೀಮಾ ಯೋಜನೆಯಡಿ ತಾಲೂಕುವಾರು ರೈತರು ತುಂಬಿದ ವಿಮಾ ಎಷ್ಟು? ಎಷ್ಟು ರೈತರಿಗೆ ಪರಿಹಾರ ಕೊಡಲಾಗಿದೆ ಎಂಬ ಬಗ್ಗೆ **Feed back** ತೆಗೆದುಕೊಂಡು ವಿವರವಾದ ಮಾಹಿತಿ ಸಲ್ಲಿಸಲು ಸೂಚಿಸಿದರು.

(ಕ್ರಮ: ಕೃಷಿ ಮತ್ತು ತೋಟಗಾರಿಕೆ ಇಲಾಖೆ)

6) ಶಿಕ್ಷಣ ಇಲಾಖೆ:

ಅನುಪಾಲನಾ ವರದಿಯನ್ನು ಪರಿಶೀಲಿಸಲಾಗಿ, ಜಿಲ್ಲೆಗೆ **STEM** ಶಿಕ್ಷಣ ಪದ್ಧತಿಯನ್ನು ತರದೇ ಇರುವ ಬಗ್ಗೆ ವಿಚಾರಿಸಿದರು. ಈ ಜಿಲ್ಲೆಯಲ್ಲಿ **STEM** ಶಿಕ್ಷಣ ಪದ್ಧತಿಯ ಹೆಚ್ಚಿನ ಬೇಡಿಕೆ ಇರುವುದಾಗಿ ತಿಳಿಸಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಯಿತು.

ಜಿಲ್ಲೆಯಲ್ಲಿ 187 ಮಣ್ಣಿನ ಗೋಡೆ ಇರುವ ಶಾಲೆಗಳು ಇದ್ದು, ಅವುಗಳ ದುರಸ್ಥಿಗಾಗಿ ಯಾವುದೇ ಅನುದಾನ ಇಲ್ಲ. ದುರಸ್ಥಿಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ ಅಧ್ಯಕ್ಷರು ಜಿಲ್ಲಾ ಪಂಚಾಯತ ರವರು ಸಭಾಧ್ಯಕ್ಷರು ಗಮನಕ್ಕೆ ತಂದರು.

ಸದರಿ ವಿಷಯದ ಬಗ್ಗೆ ಅಧಿಕಾರಿಗಳನ್ನು ವಿಚಾರಿಸಲಾಗಿ, ಎಸ್.ಎಸ್.ಎ.ದಲ್ಲಿ 2 ವರ್ಷಗಳಿಂದ ದೊಡ್ಡಪ್ರಮಾಣದ ದುರಸ್ಥಿಗೆ ಅನುದಾನ ಬಂದಿರುವುದಿಲ್ಲ. ಈಗಾಗಲೇ ಮಣ್ಣಿನ ಗೋಡೆ ಹಾಗೂ ಇಟ್ಟಂಗಿ ಗೋಡೆ ಇರುವ ಶಾಲಾ ಕೊಠಡಿಗಳ ಪಟ್ಟಿ ತಯಾರಿಸಿ ಅನುದಾನ ಬೇಡಿಕೆಗಾಗಿ ಜಿಲ್ಲಾ ಪಂಚಾಯತಿಗೆ ಸಲ್ಲಿಸಲಾಗಿದೆ ಎಂದು ಡಿ.ಡಿ.ಪಿ.ಐ ರವರು ತಿಳಿಸಿದರು. ಈಗ ಸಮಗ್ರ ಶಿಕ್ಷಣ ಅಭಿಯಾನ ಬಂದಿದ್ದಿಂದ ಸಿವಿಲ್ ಕಾಮಗಾರಿಗಳಿಗೆ ಮಾತ್ರ ಅನುದಾನ ಬರುತ್ತಿದ್ದು, ಸೇರ್ಪಡೆ ಮತ್ತು ಮಾರ್ಪಾಡುಯಡಿ ಜಿಲ್ಲಾ ಪಂಚಾಯತಕ್ಕೆ ಅನುದಾನ ಬಿಡುಗಡೆಯಾಗುತ್ತಿದೆ.

ಶಾಲಾ ಮಕ್ಕಳಿಗೆ ಎರಡನೇಯ ಸಮವಸ್ತ್ರ ಇದುವರೆಗೂ ವಿತರಣೆಯಾಗದೇ ಇರುವ ಬಗ್ಗೆ ಕಾರವಾರ-ಅಂಕೋಲಾ ಶಾಸಕರು ಸಭೆಯ ಗಮನಕ್ಕೆ ತಂದರು. ಶಾಲೆ ಮುಗಿಯುತ್ತ ಬಂದರೂ ಇನ್ನೂ ಮಕ್ಕಳಿಗೆ ಸಮವಸ್ತ್ರ ವಿತರಣೆಯಾಗಿಲ್ಲ ಎಂದರೆ ಏನು ಅರ್ಥ? ಬಡ ಮಕ್ಕಳು ಒಂದೇ ಸಮವಸ್ತ್ರದಲ್ಲಿ ಎಷ್ಟು ದಿನ ಕಳೆಯಬೇಕು? ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ಸಮವಸ್ತ್ರಕ್ಕೆ ಸರಕಾರ ಇನ್ನು ಅನುದಾನ ಬಿಡುಗಡೆ ಮಾಡಿಲ್ಲ ಎಂದು ಅಧಿಕಾರಿಗಳು ತಿಳಿಸಿದರು. ಆಗ ಸಭಾಧ್ಯಕ್ಷರು ಮಾತನಾಡಿ, ಸಮವಸ್ತ್ರ ಬಂದಿಲ್ಲವೆಂದರೆ ಸದ್ಯಕ್ಕೆ ವಾರದಲ್ಲಿ ಎರಡು ದಿನ ವಿನಾಯತಿ ನೀಡುವ ಬಗ್ಗೆ ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳೊಂದಿಗೆ ಚರ್ಚಿಸಿ ನಿರ್ಣಯ ತೆಗೆದುಕೊಳ್ಳಲು ಸೂಚಿಸಲಾಯಿತು.

ಇಕೊ ಕ್ಲಬ್ ಬಗ್ಗೆ ವಿಚಾರಿಸಿ, ಪ್ರಸ್ತುತ ಸಾಲಿನಲ್ಲಿ ಇಕೋ ಕ್ಲಬ್‌ಗೆ ಅನುದಾನ ಬಂದಿರುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದರು. ಜಿಲ್ಲೆಯಲ್ಲಿ ಗಣಿತ ಕ್ಲಬ್‌ಗಳ ನಿರ್ವಹಣೆ ಬಗ್ಗೆ ಸಮಾಧಾನ ವ್ಯಕ್ತಪಡಿಸಿದರು.

ಸಿರ್ಸಿ ಶೈಕ್ಷಣಿಕ ಜಿಲ್ಲೆಯಲ್ಲಿ ಒಟ್ಟು 74 ಕ್ಲಬ್ ಗಳನ್ನು ಮಾಡಿದ್ದು ಅವುಗಳಲ್ಲಿ 38 ಇಕೋ ಕ್ಲಬ್ ಗಳು ಚೆನ್ನಾಗಿ ನಡೆಯುತ್ತಿರುವುದಾಗಿ ಸಿರ್ಸಿ ಡಿ.ಡಿ.ಪಿ.ಐ ರವರು ಸಭೆಗೆ ಮಾಹಿತಿ ನೀಡಿದರು.

(ಕ್ರಮ: ಸಾರ್ವಜನಿಕ ಶಿಕ್ಷಣ ಇಲಾಖೆ)

7) ಅಕ್ಷರ ದಾಸೋಹ:

ಹಿಂದಿನ ಸಭೆಯಲ್ಲಿ ಶಾಲೆಗಳಲ್ಲಿ ನೀಡುವ ಮಧ್ಯಾಹ್ನದ ಬಿಸಿ ಊಟದ ಗುಣಮಟ್ಟ ತಿಳಿದುಕೊಳ್ಳಲು ಕಛೇರಿಯಲ್ಲಿ ಡೆಸ್ಕ ಟಾಪ್ ಮಾನಿಟರಿಂಗ ಮಾಡಲು ತಿಳಿಸಲಾಗಿತ್ತು ಅದರ ಬಗ್ಗೆ ಏನು ಕ್ರಮ ವಹಿಸಲಾಗಿದೆ ಎಂದು ಪ್ರಶ್ನಿಸಿದರು. ಈ ಕುರಿತು ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಶಾಲೆಗಳಲ್ಲಿ ಮಧ್ಯಾಹ್ನ ನೀಡಲಾಗುವ ಊಟಗಳು ಗುಣಮಟ್ಟದಿಂದ ಕೂಡಿರುವ ಬಗ್ಗೆ ಪ್ರತಿದಿನವೂ ಜಿಲ್ಲಾ ಮಟ್ಟದಿಂದ ಪರಿಶೀಲನೆ ನಡೆಸಲು ಕಾಮನ್ ಸರ್ವಿಸ್ ಸೆಂಟರ್ ತಂತ್ರಜ್ಞಾನ ಇದ್ದು, ಅದಕ್ಕೆ ಟೈ–ಅಪ್ ಮಾಡಲು ತಿಳಿಸಿದರು. ಸದರಿ ತಂತ್ರಜ್ಞಾನ ಅಳವಡಿಸಲು ಅನುದಾನ ಇರುವ ಬಗ್ಗೆ ವಿಚಾರಿಸಿದಾಗ, ಗುಣಮಟ್ಟ ಪರಿಶೀಲನೆಯ ತಂತ್ರಜ್ಞಾನ ಬಳಕೆಗೆ ಪ್ರತ್ಯೇಕ ಅನುದಾನ ಇಲ್ಲ ಎಂದು ಅಧಿಕಾರಿಗಳು ತಿಳಿಸಿದರು. ಜಿಲ್ಲೆಯಲ್ಲಿ ನೆಟವರ್ಕ ಸಮಸ್ಯೆಯ ಬಗ್ಗೆ ವಿಚಾರಿಸಿ, ಶಿಕ್ಷಣ ಇಲಾಖೆ ಮತ್ತು ಅಕ್ಷರ ದಾಸೋಹ ದವರು ಸಿ.ಎಸ್.ಸಿ ಜೊತೆ ಟೈ–ಅಪ್ ಮಾಡುವ ಬಗ್ಗೆ ಯೋಜನೆ ರೂಪಿಸುವುದು. ಪ್ರತಿದಿನ ಬಳಸುವ ಡಾಟಾಗಳಿಗೆ ಶಿಕ್ಷಣ ಇಲಾಖೆ ವೆಚ್ಚ ಭರಿಸುವುದು. ಈ ತಂತ್ರಜ್ಞಾನ ಬಳಕೆಯಿಂದ ಇಡೀ ಜಿಲ್ಲೆಯಲ್ಲಿರುವ ಶಾಲೆಗಳ ಬಗ್ಗೆ ಹಾಗೂ ಅಕ್ಷರ ದಾಸೋಹಕ್ಕೆ ಸಂಬಂಧಪಟ್ಟ ವರದಿಯನ್ನು ನೇರವಾಗಿ ಶಾಲೆಗಳಿಂದ ಪಡೆಯಬಹುದಾಗಿದೆ. ಇದರ ಬಗ್ಗೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಭೆ ಕರೆದು ನಿರ್ಣಯ ತೆಗೆದುಕೊಳ್ಳಲು ಸೂಚಿಸಲಾಯಿತು.

ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ, ದಾಖಲಾತಿ ಮತ್ತು ಹಾಜರಾತಿಯಲ್ಲಿ ವ್ಯತ್ಯಾಸದ ಬಗ್ಗೆ ವಿಚಾರಿಸಿದರು. ಪ್ರತಿ ದಿನ 2% ಹಾಜರಾತಿ ಕಡಿಮೆ ಇರುತ್ತಿದ್ದು, ಕೆಲವು ಮಕ್ಕಳು ಊಟ ಮತ್ತು ಹಾಲನ್ನು ನಿರಾಕರಿಸುವುದರಿಂದ ವ್ಯತ್ಯಾಸ ಕಂಡುಬರುವುದಾಗಿ ಸಭೆಗೆ ವಿವರಿಸಿದರು.

ಆಹಾರದ ಗುಣಮಟ್ಟ ಪರಿಶೀಲನೆಗಾಗಿ ಶಿಕ್ಷಣ ಇಲಾಖೆ ಮತ್ತು ಅಕ್ಷರದಾಸೋಹ ಎರಡು ಇಲಾಖೆಗಳನ್ನು ಸಾಮಾನ್ಯ ಸೇವಾ ಕೇಂದ್ರದ ಜೊತೆ ಸೇರಿಸಿ ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಹಾಗೂ ಅಕ್ಷರದಾಸೋಹದ ಕಾರ್ಯಕ್ರಮಗಳ ಡಾಟಾಗಳನ್ನು ಕಛೇರಿಯಲ್ಲಿಯೇ ಪಡೆಯುವ ಬಗ್ಗೆ ಕ್ರಮ ವಹಿಸುವಂತೆ ಸಚಿವರು ಸೂಚಿಸಿದರು.

(ಕ್ರಮ: ಜಿಲ್ಲಾಧಿಕಾರಿಗಳು,ಡಿ.ಡಿ.ಪಿ.ಐ ಮತ್ತು ಅಕ್ಷರ ದಾಸೋಹ)

8) ಜಿಲ್ಲಾ ಕೈಗಾರಿಕೆ:

ಮೆಕ್ಕೆ ಜೋಳದ ಯಂತ್ರಗಳನ್ನು ತಂದು ಡೆಮೊ ಮಾಡಿ ರೈತರಿಗೆ ಮತ್ತು ಜನರಿಗೆ ತೋರಿಸುವ ಬಗ್ಗೆ ಕ್ರಮ ಕೈಗೊಳ್ಳುವುದು ಎಂದು ಅಧಿಕಾರಿಗಳು ತಿಳಿಸಿದರು.

ಸದ್ರಿ ಇಲಾಖೆಯಿಂದ ಕೈಗೊಂಡ ಹೊಸ ತಂತ್ರಜ್ಞಾನಗಳ ಬಗ್ಗೆ ಮಾಹಿತಿಯನ್ನು ಸಭಾಧ್ಯಕ್ಷರು ಪಡೆದರು. ಸಿರ್ಸಿಯಲ್ಲಿ ಸಿಂಹ ಶಕ್ತಿ ಒಕ್ಕೂಟದವರು ಏಳು ಕೋಟಿ ಅನುದಾನದಲ್ಲಿ ವೆಜಿಟೇಬಲ್/ಫುಡ್ ಕ್ಲಸ್ಟರ್ ಮಾಡುವ ಯೋಜನೆ ಹಾಕಿಕೊಂಡಿರುವ ಬಗ್ಗೆ ಅಧಿಕಾರಿಗಳು ವಿವರಿಸಿದಾಗ, ತರಕಾರಿಯನ್ನು ಹೆಚ್ಚಾಗಿ ಗೋಕರ್ಣ ಮತ್ತು ಮುಂಡಗೋಡದಲ್ಲಿ ಬೆಳೆಯುತ್ತಾರೆ. ಅಲ್ಲಿ ಈ ಯೋಜನೆಯನ್ನು ಹಾಕಿಕೊಳ್ಳಿ, ಒಳ್ಳೆಯ ಯೋಜನೆ ಜಿಲ್ಲೆಗೆ ತರುತ್ತಿದ್ದು, ಅದರಿಂದ ಜನರಿಗೆ ಉಪಯೋಗವಾಗಬಹುದಾದ ಅಭಿವೃದ್ಧಿ ಕಾರ್ಯಕ್ರಮ ಹಾಕಿಕೊಳ್ಳಿ, ಸದರಿ ಯೋಜನೆಯನ್ನು ಸಿರ್ಸಿ ಬದಲು ಕುಮಟಾಕ್ಕೆ ತರುವ ಬಗ್ಗೆ ಯೋಚಿಸಿ, ಇದರ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಗಮನಹರಿಸುವಂತೆ ಸಭಾಧ್ಯಕ್ಷರು ತಿಳಿಸಿದರು. ತೋಟಗಾರಿಕೆ ಇಲಾಖೆಯವರು ಕ್ಲಸ್ಟರ್ ಮಾಡಲು ಜಾಗವನ್ನು ಗುರುತಿಸಿ ಕೊಡಬೇಕು. ಎರಡು ಇಲಾಖೆಯ ಕೋ–ಆರ್ಡಿನೇಟ ಮಾಡಿಕೊಂಡು ಯೋಜನೆಯನ್ನು ಅನುಷ್ಠಾನ ಮಾಡುವಂತೆ ಸಚಿವರು ಸೂಚಿಸಿದರು.

(ಕ್ರಮ: ಜಿಲ್ಲಾ ಕೈಗಾರಿಕಾ ಕೇಂದ್ರ,ಕೃಷಿ ಮತ್ತು ತೋಟಗಾರಿಕೆ ಇಲಾಖೆ)

9) ಹೆಸ್ಕಾಂ:

ದೀನದಯಾಳ ವಿದ್ಯುತ್ತೀಕರಣ ಯೋಜನೆಯಡಿ ಪ್ರಗತಿ ಕುಂಠಿತವಾಗಿರುವುದಾಗಿ ಅಸಮಾಧಾನ ವ್ಯಕ್ತಪಡಿಸಿದರು. ಇದರ ಬಗ್ಗೆ ಅಧಿಕಾರಿಗಳನ್ನು ವಿಚಾರಿಸಿದಾಗ, ಬಜಾಜ ಕಂಪನಿಯವರು ಸರಿಯಾಗಿ ಕೆಲಸ ಮಾಡದೇ ಇರುವುದರಿಂದ ಪ್ರಗತಿ ಕುಂಠಿತವಾಗಿದ್ದು. ಈಗ ಸೌಭಾಗ್ಯ ಯೋಜನೆಯಡಿ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ ಎಂದರು. ಅಂಕೋಲಾ ತಾಲೂಕಿನ ಡೊಂಗ್ರಿ ಭಾಗದಲ್ಲಿನ ದೀನದಯಾಳ

ವಿದ್ಯುತ್ತೀಕರಣ ಯೋಜನೆಯಡಿ ಆಯ್ಕೆಯಾದ ಮನೆಗಳಿಗೆ ಇದುವರೆಗೂ ವಿದ್ಯುತ್ ಸಂಪರ್ಕ ಕೊಟ್ಟಿರುವುದಿಲ್ಲ ಏಕೆ? ಎಂದು ಅಂಕೋಲಾ-ಕಾರವಾರ ಶಾಸಕಿ ಸಭೆಯಲ್ಲಿ ಅಧಿಕಾರಿಗಳಿಗೆ ಪ್ರಶ್ನಿಸಿದರು. ಸದರಿ ಮನೆಗಳನ್ನು ಸೌಭಾಗ್ಯ ಯೋಜನೆಯಡಿ ಸೇರಿಸಿಕೊಳ್ಳಲಾಗುತ್ತಿದೆ ಎಂದರು. ದೀನದಯಾಳ ಯೋಜನೆಯಡಿಯಲ್ಲಿ ಬರುವ ಮನೆಗಳಿಗೆ ಮೊದಲು ವಿದ್ಯುತ್ ಸಂಪರ್ಕ ಕಲ್ಪಿಸಲು ಸೂಚಿಸಿದರು. ದೀನದಯಾಳ ಯೋಜನೆಯಡಿ ಪ್ರಗತಿ ಕುಂಠಿತವಾಗಿರುವ ಬಗ್ಗೆ ಜಿಲ್ಲಾಧಿಕಾರಿಗಳ ನೇತ್ರತ್ವದಲ್ಲಿ ಸಭೆ ಮಾಡಿ, ಕಾಮಗಾರಿ ಪೂರ್ಣಗೊಳಿಸುವ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದು. ಕಾಮಗಾರಿ ಪೂರ್ಣಗೊಳಿಸುವಲ್ಲಿ ವಿಳಂಬ ಮಾಡಿದಲ್ಲಿ ಪ್ರತಿದಿನದಂತೆ ದಂಡ ಹಾಕುವುದಾಗಿ ನೋಟಿಸು ನೀಡುವುದು. ನಿಗದಿತ ಸಮಯದೊಳಗೆ ಕಾಮಗಾರಿ ಪೂರ್ಣಗೊಳಿಸಿದಿದ್ದಲ್ಲಿ ಅದಕ್ಕೆ ಇಲಾಖೆಯವರನ್ನು ಜವಾಬ್ದಾರರನ್ನಾಗಿ ಮಾಡಲಾಗುವುದು ಎಂದು ಸಭಾಧ್ಯಕ್ಷರು ಎಚ್ಚರಿಕೆ ನೀಡಿದರು.

(ಕ್ರಮ: ಹೆಸ್ಕಾಂ/ಜಿಲ್ಲಾಧಿಕಾರಿಗಳು)

10) ಮಹಿಳಾ ಮತ್ತುಮಕ್ಕಳ ಅಭಿವೃದ್ಧಿ ಇಲಾಖೆ:

ಮಾತೃಪೂರ್ಣಯೋಜನೆಯಡಿ ಗರ್ಭಿಣಿ ಸ್ತ್ರೀಯರು ಅಂಗನವಾಡಿಗೆ ಬಂದು ಊಟ ಮಾಡಿ ಹೋಗುವುದು ತುಂಬಾ ಕಷ್ಟ. ಆದ್ದರಿಂದ ಸದರಿ ಯೋಜನೆಯನ್ನು ಮಾತೃ ವಂದನಾ ಯೋಜನೆಯಡಿ ಸೇರಿಸಿ ಗರ್ಭಿಣಿ ಸ್ತೀಯರಿಗೆ ಹಣ ಕೊಡುವ ವ್ಯವಸ್ಥೆ ಮಾಡುವಂತೆ ಆದೇಶ ಮಾಡಲಾಗಿತ್ತು. ಅದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ಕಾರವಾರ-ಅಂಕೋಲಾ ವಿಧಾನ ಸಭಾ ಸದಸ್ಯರು ವಿಚಾರಿಸಿದರು. ಸದರಿ ವಿಷಯದ ಕುರಿತು ಯಾವುದೇ ಆದೇಶ ಬಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದರು. ಮಾತೃ ಪೂರ್ಣ ಯೋಜನೆಯನ್ನು ಕೈಬಿಡುವ ಬಗ್ಗೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು. ಸದರಿ ಯೋಜನೆಯನ್ನು ಕೈಬಿಡುವ ಬದಲು ಮಾತೃ ಪೂರ್ಣ ಯೋಜನೆಯನ್ನು ಮಾತೃ ವಂದನಾ ಯೋಜನೆಯೊಂದಿಗೆ ಜೋಡಿಸಿ ಗರ್ಭಿಣಿ ಸ್ತ್ರೀಯರಿಗೆ ಹಣ ಕೊಡುವ ವ್ಯವಸ್ಥೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

ಮಾತೃ ವಂದನಾ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳ ಅರ್ಜಿಗಳನ್ನು ತಿರಸ್ಕರಿಸಿರುವ ಬಗ್ಗೆ ವಿಚಾರಿಸಿದರು. ತಡವಾಗಿ ಅರ್ಜಿ ಸಲ್ಲಿಕೆ,ಆಧಾರ ನಂಬರ ವ್ಯತ್ಯಾಸ ಇತ್ಯಾದಿ ಕಾರಣಗಳಿಂದ ತಿರಸ್ಕರಿಸಿರುವುದಾಗಿ ಅಧಿಕಾರಿಗಳು ವಿವರಿಸಿದರು.

(ಕ್ರಮ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)

11) ಆರೋಗ್ಯ ಇಲಾಖೆ:

ಹಿಂದಿನ ಸಭೆಯಲ್ಲಿ 24x7 ರಡಿ ಸೇವೆ ವಿಸ್ತರಿಸುವ ಬಗ್ಗೆ ತಿಳಿಸಲಾಗಿತ್ತು. ಅದನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗುತ್ತಿಲ್ಲ ಎಂದು ಅಧಿಕಾರಿಗಳು ವಿವರಿಸಿದರು.

ಕುಡಿಯವ ನೀರಿನ ಗುಣಮಟ್ಟದ ಪರಿಶೀಲನೆ ಬಗ್ಗೆ ವಿಚಾರಿಸಿ ನಿಮ್ಮ ವರದಿಯಲ್ಲಿ ನೀರಿನ ಮಾದರಿ ಪಡೆದು ಪರಿಶೀಲಿಸಿ, ನೀರಿನ ಗುಣಮಟ್ಟ ಸರಿಯಿಲ್ಲ ಎಂದು ತಿಳಿಸಿರುತ್ತೀರಿ. ಇದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ, ಇದಕ್ಕೆ ಏನು ಪರಿಹಾರ? ಜನವರಿಯಿಂದಲೇ ನೀರಿನ ಅಭಾವ ಪ್ರಾರಂಭವಾಗಿದೆ. ಮುಂದುವರಿದಂತೆ ಏಪ್ರಿಲ್ - ಮೇ ತಿಂಗಳಲ್ಲಿ ನೀರಿನ ಮಟ್ಟ ಕೆಳಗೆ ಹೋಗುವುದರಿಂದ ಅಲ್ಲಿನ ಜನರು ಅದೇ ನೀರನ್ನೇ ಉಪಯೋಗಿಸಬೇಕಾಗುತ್ತದೆ. ಇದು ತುಂಬಾ ಗಂಭೀರವಾದ ವಿಷಯ. ಮುಂಡಗೋಡ,ಹಳಿಯಾಳ ಮತ್ತು ಯಲ್ಲಾಪುರ ತಾಲೂಕುಗಳಲ್ಲಿ ವಾಂತಿ,ಬೇದಿ ಪ್ರಕರಣ ಕಂಡು ಬಂದಿರುವುದಾಗಿ ವರದಿಯಲ್ಲಿ ತಿಳಿಸಲಾಗಿದೆ. ಇದರ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ಎಂದು ವಿಚಾರಿಸಿದರು. ಕುಡಿಯುವ ನೀರಿನ ಪೈಪ್ ಲೈನ್ ಒಡದಿದ್ದರಿಂದ ಈ ಸಮಸ್ಯೆ ಉಂಟಾಗಿದ್ದು, ಈಗ ಪೈಪ್‌ಲೈನ್‌ಗಳನ್ನು ಸರಿಪಡಿಸಲಾಗಿದೆ ಎಂದರು. ಕಾರವಾರದ ಕೊಣೆನಾಲ ಮತ್ತು ಸಮುದ್ರದಲ್ಲಿ ಇ.ಕೊಲಿ ಬ್ಯಾಕ್ಟೀರಿಯಾ ಇದ್ದು, ನೀರು ಕುದಿಸಿಕೊಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಆದ್ದರಿಂದ ಆರೋಗ್ಯ ಇಲಾಖೆಯ ವರದಿ ಮತ್ತು ಕುಡಿಯುವ ನೀರು ಇಲಾಖೆಯವರ ವರದಿಯ ಆಧಾರದ ಮೇಲೆ ಪ್ರತಿ ವರ್ಷಕೊಮ್ಮೆ ಕುಡಿಯುವ ನೀರಿನ ಗುಣಮಟ್ಟದ ಬಗ್ಗೆ ಆಡಿಟ್ ಮಾಡಿ, ಎಲ್ಲಿನ ನೀರಿನ ಸಮಸ್ಯೆ ಇದೆ ಅಲ್ಲಿ ಟ್ರೀಟಮೆಂಟ್ ಮಾಡುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

ಪ್ರಗತಿ ವರದಿಯನ್ನು ಪರಿಶೀಲಿಸಿ, ಜಿಲ್ಲೆಯಲ್ಲಿ ಮಂಗನ ಕಾಯಿಲೆ ಪ್ರಕರಣಗಳು ಪತ್ತೆಯಾದ ಸ್ಥಳಗಳಲ್ಲಿ ಕೈಗೊಂಡಿರುವ ಕ್ರಮದ ಬಗ್ಗೆ ವಿಚಾರಿಸಲಾಗಿ, ಈಗಾಗಲೇ ಮಂಗನ ಕಾಯಿಲೆ ಪತ್ತೆಯಾಗಿರುವಲ್ಲಿ ಮುಂಜಾಗೃತಾ ಕ್ರಮ ವಹಿಸಿದ್ದು, 5 ಕಿ.ಮೀ. ವ್ಯಾಪ್ತಿಯ ವರೆಗೆ ವ್ಯಾಕ್ಸಿನೇಷನ್ ಮಾಡಲಾಗಿದೆ. ಕಾಯಿಲೆ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ವಿವರಿಸಿದರು.

ಸಿರ್ಸಿ ತಾಲೂಕಿನಲ್ಲಿ ಶಿಶು ಮರಣದ ಸಂಖ್ಯೆ ಹೆಚ್ಚಾಗಿರುವ ಬಗ್ಗೆ ವಿಚಾರಿಸಿದರು. ಸಿರ್ಸಿ ತಾಲೂಕಿನಲ್ಲಿ ಸೊರಬ,ಹಾಸನ ,ಹಳಿಯಾಳ ಮುಂಡಗೋಡ ಮತ್ತು ಯಲ್ಲಾಪುರ ತಾಲೂಕುಗಳಿಂದ ಹೆರಿಗೆಗಾಗಿ ಬರುತ್ತಿದ್ದು, ಆಸ್ಪತ್ರೆಗೆ ತಡವಾಗಿ ದಾಖಲಾಗುತ್ತಾರೆ. ಹಾಗೂ ಕೊನೆಯ ಹಂತದಲ್ಲಿ ಬರುತ್ತಾರೆ ಇದರಿಂದಾಗಿ ಅಲ್ಲಿ ಶಿಶು ಮರಣದ ಸಂಖ್ಯೆ ಜಾಸ್ತಿಯಾಗಿರುವ ಬಗ್ಗೆ ಅಧಿಕಾರಿಗಳು ಸಭೆಗೆ ವಿವರಣೆ ನೀಡಿದರು.

ಆಯುಷ್ಯಮಾನ ಭಾರತ ಆರೋಗ್ಯ ಕರ್ನಾಟಕ ಯೋಜನೆಯಡಿ ಖಾಸಗಿ ಆಸ್ಪತ್ರೆಗೆ ದಾಖಲಾಗಲು ಜಿಲ್ಲಾ ಆಸ್ಪತ್ರೆಯಿಂದ ಪತ್ರ ಕೇಳುತ್ತಿರುವುದರಿಂದ ಜನರಿಗೆ ತುಂಬಾ ತೊಂದರೆಯಾಗುತ್ತಿರುವ ವಿಷಯ ಗಮನಕ್ಕೆ ಬಂದಿದು, ಖಾಸಗಿ ಆಸ್ಪತ್ರೆಗಳಿಗೆ ಇದರ ಬಗ್ಗೆ ಸರಿಯಾದ ಮಾಹಿತಿ ಒದಗಿಸಲು ತಿಳಿಸಿ, ಜನರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಕ್ರಮ ವಹಿಸಲು ಸೂಚಿಸಲಾಯಿತು.

(ಕ್ರಮ: ಆರೋಗ್ಯ ಇಲಾಖೆ/ಗ್ರಾಮೀಣ ಕುಡಿಯುವ ನೀರು/ನಗರ ಸ್ಥಳೀಯ ಸಂಸ್ಥೆಗಳು)

ಕೇಂದ್ರ ಸರಕಾರದ ಈ ಕೆಳಕಂಡ ವಿವಿಧ ಯೋಜನೆಗಳಡಿ ಇಲಾಖೆಯವರು ಸಾಧಿಸಿದ ಪ್ರಗತಿಯ ಕುರಿತು ಪರಿಶೀಲನೆ ನಡೆಸಿದರು.

12) ಎನ್ ಆರ್. ಇ.ಜಿ.ಎ:

ಪ್ರಗತಿ ವರದಿಯನ್ನು ಪರಿಶೀಲಿಸಲಾಯಿತು. **wage payment** ಮಾಡಲು ಸಮಸ್ಯೆಯಾಗುತ್ತಿರುವ ವಿಷಯವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಸದರಿ ವಿಷಯದ ಬಗ್ಗೆ ವಿಚಾರ ಮಾಡುವುದಾಗಿ ಸಚಿವರು ತಿಳಿಸಿದರು.

13) ಎನ್.ಆರ್.ಎಲ್.ಎಂ:

ಜಿಲ್ಲೆಯಲ್ಲಿ ಡಿ.ಡಿ.ಯು.ಜಿಕೆ.ವೈಯಡಿ ತರಬೇತಿ ಕೈಗೊಳ್ಳಲು ಹಾಗೂ ಅನುದಾನದ ಬೇಡಿಕೆ ಬಗ್ಗೆ ವಿವರವಾದ ವರದಿ ಸಲ್ಲಿಸಲು ಸೂಚಿಸಲಾಯಿತು.

(ಕ್ರಮ: ಎನ್.ಆರ್.ಎಲ್.ಎಂ)

14) ಎಸ್.ಬಿ.ಎಂ.:

ಪ್ರಗತಿ ವರದಿಯನ್ನು ಪರಿಶೀಲಿಸಿ, ಹೊಸದಾಗಿ ನಿರ್ಮಾಣಗೊಂಡ ಮನೆಗಳಿಗೆ ನಂಬರ್ ಕೊಡುವಾಗ ಶೌಚಾಲಯ ಕಟ್ಟಿಕೊಳ್ಳುವುದನ್ನು ಕಡ್ಡಾಯ ಮಾಡುವಂತೆ ಸೂಚಿಸಿದರು.

15) ಅಂಗವಿಕಲ ಇಲಾಖೆ:

ಅಂಗವಿಕಲ ವೇತನದಡಿ ಸೈಕಲ್ ವಿತರಿಸಿದ ಫಲಾನುಭವಿಗಳಿಗೆ ವಾಹನದ ಬೇಡಿಕೆ ಸಲ್ಲಿಸುವಂತೆ ಸೂಚಿಸಲಾಯಿತು.

(ಕ್ರಮ: ಅಂಗವಿಕಲ )

16) ಪಶು ಸಂಗೋಪನೆ:

ಆರ್.ಕೆ.ವಿ.ವೈ ಯಡಿ ಶೇ 100% ಪ್ರಗತಿ ಸಾಧಿಸಲು ಸೂಚಿಸಲಾಯಿತು.

(ಕ್ರಮ: ಪಶು ಸಂಗೋಪನೆ)

ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ,
ರಾಜ್ಯ ಸಚಿವರು ಹಾಗೂ
ಅಧ್ಯಕ್ಷರು ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ
ಮತ್ತು ಉಸ್ತುವಾರಿ(ದಿಶಾ) ಸಮಿತಿ,
ಉತ್ತರ ಕನ್ನಡ,

ಸಂ:ಉ.ಕ./ಜಿಪಂ/(ದಿಶಾ)/ಸಿಆರ್-34/2019-20

ಉ.ಕ. ಜಿಲ್ಲಾ ಪಂಚಾಯತ ಕಾರ್ಯಾಲಯ,
(ಎನ್‌ಆರ್‌ಎಲ್‌ಎಮ್ ಶಾಖೆ)
ಕಾರವಾರ ದಿನಾಂಕ: 09-07-2019.

**ಪ್ರತಿ ಗೌರವಪೂರ್ವಕವಾಗಿ ಮಾಹಿತಿಗಾಗಿ, ಸಲ್ಲಿಸಿದೆ.**

1. ಸನ್ಮಾನ್ಯ ಶ್ರೀ ಅನಂತಕುಮಾರ ಹೆಗಡೆ, ಆಪ್ತ ಕಾರ್ಯದರ್ಶಿಗಳು ಮಾನ್ಯ ಲೋಕಸಭಾ ಸದಸ್ಯರು ಕೆನರಾ ಕ್ಷೇತ್ರ 12- ಉತ್ತರ ಕನ್ನಡ , ಕಾರವಾರ ರವರ ಆದ್ಯ ಗಮನಕ್ಕೆ ತರಲು ಕೋರಿದೆ.
2. ಸನ್ಮಾನ್ಯ ಶ್ರೀ ಆರ್ ವಿ ದೇಶಪಾಂಡೆ, ಮಾನ್ಯ ಕಂದಾಯ ಸಚಿವರು, ಉಸ್ತುವಾರಿ ಸಚಿವರು, ವಿಧಾನ ಸೌಧ ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳಿಗೆ ಸಲ್ಲಿಸುತ್ತಾ, ಸನ್ಮಾನ್ಯ ಸಚಿವರ ಆದ್ಯ ಗಮನಕ್ಕೆ ತರಲು ಕೋರಿದೆ.
3. ಉತ್ತರ ಕನ್ನಡ ಜಿಲ್ಲಾ ಪಂಚಾಯತ ಅಧ್ಯಕ್ಷರು.
4. ಮಾನ್ಯ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾನ್ಯ ವಿಧಾನ ಸಭಾ ಸದಸ್ಯರು, ಶಿರಸಿ.
5. ಮಾನ್ಯ ಶ್ರೀಮತಿ ರೂಪಾಲಿ ನಾಯ್ಕ,ವಿಧಾನ ಸಭಾ ಸದಸ್ಯರು, ಕಾರವಾರ.
6. ಮಾನ್ಯ ಶ್ರೀ ದಿನಕರ ಶೆಟ್ಟಿ, ಮಾನ್ಯ ವಿಧಾನ ಸಭಾ ಸದಸ್ಯರು, ಕುಮಟಾ.
7. ಮಾನ್ಯ ಶ್ರೀ ಶಿವರಾಮ ಹೆಬ್ಬಾರ, ಮಾನ್ಯ ವಿಧಾನ ಸಭಾ ಸದಸ್ಯರು, ಯಲ್ಲಾಪುರ.
8. ಮಾನ್ಯ ಶ್ರೀ ಸುನಿಲ ನಾಯ್ಕ, ಮಾನ್ಯ ವಿಧಾನ ಸಭಾ ಸದಸ್ಯರು, ಭಟ್ಕಳ.
9. ಮಾನ್ಯ ಶ್ರೀ ಎಸ್.ಎಲ್ ಘೋಟ್ನೇಕರ್, ವಿಧಾನ ಪರಿಷತ ಸದಸ್ಯರು, ಹಳಿಯಾಳ.
10. ಮಾನ್ಯ ಶ್ರೀ ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸದಸ್ಯರು, ಹುಬ್ಬಳ್ಳಿ.
11. ಮಾನ್ಯ ಶ್ರೀ ಎಸ್.ವಿ. ಸಂಕನೂರ, ವಿಧಾನ ಪರಿಷತ್ ಸದಸ್ಯರು, ಗದಗ.
12. ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ, ಕಾರವಾರ.
13. ಜಿಲ್ಲೆಯ ಎಲ್ಲಾ ತಾಲೂಕ ಪಂಚಾಯತ ಅಧ್ಯಕ್ಷರುಗಳು.

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ನಡುವಳಿ ಮೇಲೆ ಅನುಪಾಲನಾ ವರದಿ ಸಲ್ಲಿಸಲು ತಿಳಿಸಿ ರವಾನಿಸಿದೆ.**

1. ಎಲ್ಲಾ ಶಾಖಾ ಮುಖ್ಯಸ್ಥರು, ಜಿಲ್ಲಾ ಪಂಚಾಯತ ಕಾರವಾರ.
2. ಕಾರ್ಯನಿರ್ವಾಹಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ/ಶಿರಸಿ.
3. ಸಹಾಯಕ ಕಮೀಶನರ್, ಕಾರವಾರ/ಕುಮಟಾ/ಭಟ್ಕಳ/ಶಿರಸಿ.
4. ಜಿಲ್ಲೆಯ ಎಲ್ಲಾ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು.
5. ಸಂಬಂಧ ಪಟ್ಟ ಅನುಷ್ಠಾನಾಧಿಕಾರಿಗಳಿಗೆ.

9/7/2019

ಯೋಜನಾ ನಿರ್ದೇಶಕರು (ಡಿ.ಆರ್.ಡಿ.ಎ) ಪ್ರಭಾರ
ಜಿಲ್ಲಾ ಪಂಚಾಯತ ಕಾರವಾರ, ಉ.ಕ

09-07-2019 Dihsa (MP) Naduvali